# ಹೊಸ್ತಿಲು

ಹೊಸ್ತಿಲೆಂಬುದು ಒಳಜಗತ್ತನ್ನು ಹೊರಜಗತ್ತಿನಿಂದ ಪ್ರತ್ಯೇಕಿಸುವ ಸೀಮಾರೇಖೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆಲಯವನ್ನು ಬಯಲಿನಿಂದ ಬೇರ್ಪಡಿಸುವುದೇ ಹೊಸ್ತಿಲು. ಹೊಸ್ತಿಲೊಳಗೆ ನಮ್ಮ ವೈಯಕ್ತಿಕ ಹಂಬಲಗಳನ್ನು ಈಡೇರಿಸಿಕೊಳ್ಳುವ, ನಮ್ಮ ನೋವು ನಲಿವುಗಳನ್ನು ಹಂಚಿಕೊಳ್ಳುವ, ನಮ್ಮದೇ ಆದ ಕನಸುಗಳನ್ನು ಕಾಣುವ ಆಪ್ತ ವಾತಾವರಣ ಸೃಷ್ಟಿಯಾಗುತ್ತದೆ. ಅರ್ಥಾತ್ ನಮ್ಮ ಮನೆಯ ಹೊಸ್ತಿಲಿನ ಒಳಗೆ ನಮ್ಮ ಖಾಸಗೀ ಜೀವನ ಅರಳಿಕೊಳ್ಳುತ್ತದೆ. ಮನೆಯ ಹೊಸ್ತಿಲು ದಾಟಿ ಹೊರ ಹೊರಟಾಗ ನಾವು ಹೊರಜಗತ್ತಿನ ಪ್ರಜೆಗಳಾಗುತ್ತೇವೆ. ಆಗ ನಮ್ಮ ಖಾಸಗೀತನದ ಪರಿಮಿತಿಯಿಂದ ಹೊರಬಂದು, ಸಾರ್ವಜನಿಕ ವಲಯದ ಸಂವಿಧಾನಕ್ಕೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಹೊಸ್ತಿಲೆಂಬುದು ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಸ್ವರೂಪವನ್ನು ಪರೋಕ್ಷವಾಗಿ ನಿಯಂತ್ರಿಸುತ್ತದೆ ಎನ್ನಬಹುದು.

ಹಿಂದೂ ಸಂಪ್ರದಾಯದ ಪ್ರಕಾರ ಮನೆಯ ಪ್ರಧಾನ ದ್ವಾರದ ಹೊಸ್ತಿಲು ಪೂಜಾರ್ಹವಾದುದು. ಸಂಪ್ರದಾಯ ಶ್ರದ್ಧೆಯುಳ್ಳ ಹಿಂದೂ ಗೃಹಿಣಿ ಪ್ರತಿನಿತ್ಯ ಮುಂಜಾನೆ ರಂಗೋಲಿ ಹಾಕಿ, ಕುಂಕುಮವಿರಿಸಿ, ಹೂಗಳಿಂದ ಅಲಂಕರಿಸಿ, ಹೊಸ್ತಿಲನ್ನು ಪೂಜಿಸುತ್ತಾಳೆ; ಮನೆಯೊಳಗೆ ಸದಾ ನೆಮ್ಮದಿ ನೆಲಸಿರಲೆಂದು ಹೊಸ್ತಿಲ ದೇವತೆಯನ್ನು ಪ್ರಾರ್ಥಿಸುತ್ತಾಳೆ. ಆದ್ದರಿಂದಲೇ ಕವಿ ಬೇಂದ್ರೆಯವರು ಮನೆಯೊಡತಿಯನ್ನು– 'ಮನೆಯ ಹೊಸ್ತಿಲಿಗೆ ಶುಭ ಬರೆಯುವಾಕೆ ಮಂಗಳವ ಬಾರೆಂದು ಕರೆಯುವಾಕೆ' ಎಂದು ಕೀರ್ತಿಸಿರುವುದು. 'ಹೊಸ್ತಿಲು ಮನೆಗೊಂದು ರಕ್ಷೆಯಿದ್ದಂತೆ, ಅದು ಒಳಿತೆಲ್ಲವನ್ನೂ ಒಳಗೆ ಕಳುಹಿಸಿ, ಕೆಡುಕನ್ನು ತಡೆಯುತ್ತದೆ' ಎಂಬ ನಂಬಿಕೆ ನಮ್ಮ ಹಿರಿಯರದು. ಶುಚಿಪ್ರಜ್ಞೆಯುಳ್ಳವರು ಮನೆಯೊಳಕ್ಕೆ ಪ್ರವೇಶಿಸುವ ಮೊದಲು, ಹೊಸ್ತಿಲ ಹೊರಗೇ ತಮ್ಮ ಪಾದರಕ್ಷೆಗಳನ್ನು ಕಳಚಿಡುತ್ತಾರೆ. ಹೊರ ಪ್ರಪಂಚದ ಕಸಕೊಳೆಗಳು ಮನೆಯೊಳಗೆ ಹೋಗದಿರಲೆಂಬುದೇ ಇದರ ಮುಖ್ಯ ಉದ್ದೇಶ. ಹೊಸ್ತಿಲು ಮನೆಯೊಳಗಿರುವವರ ಸುಖ ಸಂಭ್ರಮದ ಗಳಿಗೆಗಳನ್ನೂ, ದುಃಖ ದುಮ್ಮಾನಗಳ ಸಂದರ್ಭಗಳನ್ನೂ ತನ್ನದೇ ಆದ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ. ಎಳೆಯ ಮಗು ಹೊಟ್ಟೆ ಎಳೆದುಕೊಂಡು, ಮೊದಲ ಬಾರಿಗೆ ಹೊಸ್ತಿಲು ದಾಟಿತೆಂದರೆ, ಮಗುವಿನ ತಾಯಿ ತಂದೆಯರಿಗೆ, ಮನೆಯ ಹಿರಿಯರಿಗೆ ಸಂಭ್ರಮವೋ ಸಂಭ್ರಮ! ಮಗುವಿನ ಈ 'ಸೀಮೋಲ್ಲಂಘನ' ಅದರ ಆರೋಗ್ಯಪೂರ್ಣ ಬೆಳವಣಿಗೆಯ ದ್ಯೋತಕವೆಂದೇ ಭಾವಿಸಲಾಗುತ್ತದೆ. ಇನ್ನು ನವ ವಧುವನ್ನು 'ಮನೆ ತುಂಬಿಸಿಕೊಳ್ಳುವ' ಸಂದರ್ಭದಲ್ಲಿ ಹೊಸ್ತಿಲು ಮುಖ್ಯ ಪಾತ್ರವಹಿಸುತ್ತದೆ. ನವ ವಿವಾಹಿತರು ಮನೆಯ ಮುಖ್ಯ ದ್ವಾರವನ್ನೂ, ಹೊಸ್ತಿಲನ್ನೂ ಪೂಜಿಸಿ, ತಮ್ಮ ಮನಸ್ಸಿನಲ್ಲಿ ಶುಭವನ್ನು ಆವಾಹನೆ ಮಾಡಿಕೊಳ್ಳುತ್ತಾರೆ. ಮದುಮಗಳು ಹೊಸ್ತಿಲಿಗೆ ನಮಸ್ಕರಿಸಿ, ಅದರ ಮೇಲಿರಿಸಿದ ಅಕ್ಕಿ ತುಂಬಿದ ಪಾತ್ರೆಯನ್ನು ಬಲಗಾಲಿನಿಂದ ಒಳಕ್ಕೆ ತಳ್ಳಿ, ಮನೆಯೊಳಕ್ಕೆ ಕಾಲಿಟ್ಟಾಗ, ಆಕೆ ತನ್ನೊಂದಿಗೆ ಸಮೃದ್ಧಿ, ನೆಮ್ಮದಿ, ಆನಂದಗಳೆಲ್ಲವನ್ನೂ ತಂದಿದ್ದಾಳೆಂದು ಮನೆಯವರು ಸಂಭ್ರಮಿಸುತ್ತಾರೆ. ಹಾಗೆಯೇ ಶ್ರದ್ಧಾಳುಗಳು ದೇವಾಲಯ ಪ್ರವೇಶಿಸುವ ಮುನ್ನ ಹೊಸ್ತಿಲಿಗೆ ನಮಸ್ಕರಿಸಿಯೇ ಒಳಗೆ ಕಾಲಿಡುತ್ತಾರೆ. ಮನೆಯೊಳಗೆ ದುಃಖದ ಘಟನೆ ಸಂಭವಿಸಿದಾಗ ಅಥವಾ ಅಂಥ ಸಂದರ್ಭದ ಆಚರಣೆ ನಡೆದಿದ್ದಾಗ ಹೊಸ್ತಿಲ ಮೇಲೆ ರಂಗೋಲಿ ಹಾಕಬಾರದೆನ್ನುವ ಪದ್ಧತಿಯೂ ಉಂಟು. ಮನೆಯ ನೀತಿ ನಿಯಮಗಳನ್ನು ಧಿಕ್ಕರಿಸಿ ಹೊರಹೋದವರನ್ನು 'ಹೊಸ್ತಿಲು ದಾಟಿದವರು' ಎಂದು ದೂರವಿರಿಸುತ್ತಾರೆ. 'ಇನ್ನು ಮುಂದೆ ನಮ್ಮ ಮನೆಯ ಹೊಸ್ತಿಲು ತುಳಿಯಬೇಡ' ಎಂದು ಒಮ್ಮೆ ಯಾರಿಗಾದರೂ ಹೇಳಿದರೆ, ನಮ್ಮ ಮತ್ತು ಅವರ ಸಂಬಂಧ ಕೊನೆಗೊಂಡಂತೆಯೇ!

ಮನೆಯ ಒಳಗು ಗೆಲುವಿನಿಂದ ಕೂಡಿದ್ದರೆ, ಹೊಸ್ತಿಲೂ ಅಲಂಕರಿಸಿಕೊಂಡು ಗೆಲುವಾಗಿರುತ್ತದೆ. ಮನೆಯವರ ಅನುಪಸ್ಥಿತಿಯಲ್ಲಿ ಅಥವಾ ಅವರ ನೋವಿನ ಗಳಿಗೆಗಳಲ್ಲಿ ಹೊಸ್ತಿಲೂ ಮಂಕಾಗುತ್ತದೆ. ನಮ್ಮೆಲ್ಲರ ಮನಸ್ಸೆಂಬ ಮನೆಯ ಬಾಗಿಲಿಗೂ ಒಂದು ಹೊಸ್ತಿಲಿದೆ. ಅದು ಒಳಿತನ್ನು ಒಳಗೆ ಬಿಟ್ಟು, ಕೆಡುಕನ್ನು ದೂರವಿರಿಸುವುದರಲ್ಲಿ ಯಶಸ್ವಿಯಾದಾಗ ಮಾತ್ರ ಬದುಕು ಸುಂದರವಾಗುತ್ತದೆ. ಹೀಗಾಗಲು ನಮ್ಮೊಳಗಿನ ಸಾಕ್ಷೀಪ್ರಜ್ಞೆಯ ನಿರಂತರ ಕಾವಲಿರಬೇಕು, ಹಾಗಿಲ್ಲವಾದಲ್ಲಿ ಬಸವಣ್ಣನವರು ಹೇಳಿದಂತೆ– 'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?...' ಹೊಸ್ತಿಲಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?...' ಎಂದು ಸಂದೇಹಿಸುವಂತಾಗುತ್ತದೆ.

■ ವೈನತೇಯ

## ಮಾತೇ ಮುತ್ತು

★ ಓದು ಬರಹ ಬಲ್ಲ ಒಂದು ಸಮೂಹ ಹಾಗೂ ಮಾಲೀಕರು ಒಂದು ಕಡೆ ಇದ್ದರೆ, ಆದಿವಾಸಿ ಸಮುದಾಯ ಸಮಾಜದ ಮುಖ್ಯ ವಾಹಿನಿಯಿಂದ ಬೇರ್ಪಟ್ಟು ಬದುಕುತ್ತಿದೆ. ಇವರಿಂದ ಒಬ್ಬನೇ ಒಬ್ಬ ಪತ್ರಕರ್ತ ಹುಟ್ಟಿಬಂದಿಲ್ಲ. ಹಾಗಾಗಿ ಪತ್ರಿಕೋದ್ಯಮ ಸಂಪೂರ್ಣ ಏಕಮುಖವಾಗಿದೆ.

–ಶುಭ್ರಾಂಶು ಚೌಧುರಿ

★ ಶೂದ್ರರಿಗೆ ಆದ ಅನ್ಯಾಯವನ್ನು ಸರಿಪಡಿಸಲು ಹೋರಾಡುವವರು ಬ್ರಾಹ್ಮಣರ ವಿರುದ್ಧ ಅನಗತ್ಯವಾಗಿ ಬರೆಯಬೇಕಿಲ್ಲ. ಬ್ರಾಹ್ಮಣರನ್ನು ಮೀರಿಸುವ ರೀತಿಯಲ್ಲಿ ಬೆಳೆಯಬೇಕು.

–ಕುವೆಂಪು

★ ಕಾಣದೆ ತುಳಿಯಲ್ಪಟ್ಟ ಕತ್ತಿಯಾಗಲೀ ಹಾವಾಗಲೀ ಅಪಾಯವನ್ನು ಉಂಟುಮಾಡುತ್ತವೆ. ಆದರೆ ಅವುಗಳಿಗಿಂತ ಹೆಚ್ಚಾಗಿ ಶರೀರದಲ್ಲಿರುವ ಸಿಟ್ಟು ಪ್ರಾಣಿಗಳಿಗೆ ಹಾನಿಯನ್ನುಂಟು ಮಾಡುತ್ತದೆ.

–ಮನುಸ್ಮೃತಿ

★ ಯಾರು ಕೋಪಕ್ಕೆ ವಶನಾಗುವನೋ ಅವನು ಪವಿತ್ರವಾದವನಲ್ಲ, ತಪಸ್ವಿಯಲ್ಲ, ಯಾಗ ಮಾಡುವವನೂ ಅಲ್ಲ, ಧರ್ಮಯುಕ್ತನೂ ಅಲ್ಲ, ಅಂಥವನಿಗೆ ಇಹಪರಗಳೆಂಬ ಎರಡು ಲೋಕಗಳೂ ಇಲ್ಲ.

–ಸುಭಾಷಿತ ಸುಧಾನಿಧಿ

★ ಭಯಂಕರವಾದ ಕಷ್ಟದಲ್ಲಿ ಮುಳುಗುತ್ತಿರುವವರನ್ನು ನೆಂಟರಾಗಲೀ, ಮಿತ್ರರಾಗಲೀ, ಬೇಕಾದಷ್ಟು ಹಣವಾಗಲೀ –ರಕ್ಷಿಸಲಾರದು.

–ನಾರದಸ್ಮೃತಿ

★ ಮನುಷ್ಯನ ಉತ್ಕರ್ಷವೇ ಮತದ ಗುರಿ.

–ರವೀಂದ್ರನಾಥ ಠಾಕೂರ್

★ ಮದುವೆ ಮಾಡಿಕೊಂಡರೂ, ಮಾಡಿಕೊಳ್ಳದಿದ್ದರೂ ಪಶ್ಚಾತ್ತಾಪ ಪಡಲೇಬೇಕು.

–ಡಿ.ಲಾಯರ್ಟಿಯಸ್

★ ಪ್ರಜಾ ರಕ್ಷಣೆಗಾಗಿ ಮಾಡುವ ಕಾರ್ಯವು ಕ್ರೂರವಾಗಿರಲಿ ಇಲ್ಲದಿರಲಿ, ಪಾಪಹೇತುವಾಗಿರಲಿ ದೋಷಯುಕ್ತವಾಗಿರಲಿ, ಪ್ರಜಾಪಾಲನೆಯ ಹೊಣೆ ಹೊತ್ತವನು ಅದನ್ನು ಮಾಡಲೇಬೇಕು.

–ರಾಮಾಯಣ

★ ಬುದ್ಧಿಮತ್ತೆ, ಚಾಕಚಕ್ಯತೆ ಎಲ್ಲ ಇದ್ದೂ ತನ್ನ ಸ್ವಾರ್ಥವನ್ನು ಮಾತ್ರ ನೋಡಿಕೊಳ್ಳುವವನು ಎಂದೂ ನಾಯಕನಾಗಲಾರ. ತಾನು ಪ್ರತಿನಿಧಿಸುವ ಸಮೂಹದ ಹಿತವನ್ನು ಕಾಪಾಡುವವನು ನಾಯಕನೆನಿಸಿಕೊಳ್ಳುತ್ತಾನೆ.

–ಅನುಭವಾಮೃತ

★ ರೂಪ ಲಾವಣ್ಯಕ್ಕಿಂತ, ರೂಪಾಯಿ ಲಾವಣ್ಯಕ್ಕಿಂತ, ಆರೋಗ್ಯವಾಗಿರುವ ಹೆಣ್ಣನ್ನು ಮದುವೆಯಾಗಿ; ಮನೆಯನ್ನು ಆಸ್ಪತ್ರೆ ಮಾಡಿಕೊಳ್ಳಬೇಡಿ.

–ನಾ.ಕಸ್ತೂರಿ

★ ಮದುವೆ ಹಾಗೂ ಸ್ನೇಹಗಳಲ್ಲಿ 'ಆಕಸ್ಮಿಕ'ದ ಪಾತ್ರ ಮಹತ್ವದ್ದು.

–ಎಚ್.ಬಿ.ಆಡಮ್ಸ್